ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯಕರ್ನಾಟಕ    ದಿನಾಂಕ : DATE : 13/9/21

## ವಿಜಯ ಕರ್ನಾಟಕ ಒಳಮೀಸಲು ವೆಬಿನಾರ್‌ನಲ್ಲಿ ಸರ್ವ ಸಮ್ಮತ ಬೇಡಿಕೆ

### ಮೂರೂ ವರದಿಗಳ ಸಮಗ್ರ ಚರ್ಚೆ ನಡೆಸಿ ಜಾರಿಗೆ ಶಿಫಾರಸು ಮಾಡಲಿ

# ಒಳಮೀಸಲಿಗೇ ಒಮ್ಮತ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಪರಿಶಿಷ್ಟ ಜಾತಿಯೊಳಗಿನ ಉಪಜಾತಿಗಳಿಗೆ ಒಳಮೀಸಲು ಬೇಕೇ ಬೇಕು. ನಿರ್ಲಕ್ಷಿತ ಸಮುದಾಯಗಳಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ಜತೆಗೆ ಕಾಂತರಾಜ್ ವರದಿ ಮತ್ತು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ವರದಿಯನ್ನೂ ವಿಧಾನಮಂಡಲದಲ್ಲಿ ಮಂಡಿಸಬೇಕು ಎಂಬ ಆಗ್ರಹ ಕೇಳಿಬಂದಿದೆ.

'ಒಳ ಮೀಸಲು' ಕುರಿತು 'ವಿಜಯ ಕರ್ನಾಟಕ' ಶನಿವಾರ ಆಯೋಜಿಸಿದ್ದ ವೆಬಿನಾರ್‌ನಲ್ಲಿ ಭಾಗವಹಿಸಿದ ಸ್ವತಃ ನ್ಯಾ. ಎ.ಜೆ. ಸದಾಶಿವ ಸೇರಿ ಸಮಾಜದ ನಾನಾ ಮುಖಂಡರು ಈ ಬೇಡಿಕೆ ಮಂಡಿಸಿದರು. ಪರಿಶಿಷ್ಟ ಜಾತಿಗಳ ಮೀಸಲಾತಿಯಲ್ಲಿ ಒಳಮೀಸಲು ನೀಡಬಹುದು ಎಂದು ಸುಪ್ರೀಂ ಇತ್ತೀಚೆಗೆ ಅಭಿಪ್ರಾಯಪಟ್ಟಿತ್ತು. ಇದರ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಒಳಮೀಸಲಿನ ಬೇಡಿಕೆ ಹೆಚ್ಚಿದೆ. ರಾಜ್ಯದ ಮಟ್ಟಿಗೆ ಸದಾಶಿವ ಆಯೋಗದ ವರದಿಯೇ ಒಳಮೀಸಲಿನ ಪ್ರಮುಖ ಆಕರ. ಆದರೆ, ಅದರಲ್ಲಿರುವ ಅಂಶಗಳ ಬಗ್ಗೆ ಊಹಾಪೋಹಗಳ ಆಧಾರದಲ್ಲಿ ಪರ-ವಿರೋಧ ಚರ್ಚೆಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಮೂರೂ ವರದಿಗಳನ್ನು ಮಂಡಿಸಿ, ವೈಜ್ಞಾನಿಕ ಪರಾಮರ್ಶೆಗೆ ಒಳಪಡಿಸಿ ಕೇಂದ್ರಕ್ಕೆ ಕಳುಹಿಸಿಕೊಡಬೇಕು ಎಂದು ತಜ್ಞರು, ಮುಖಂಡರು ಅಭಿಪ್ರಾಯಪಟ್ಟರು.

ವಿಕ ವೆಬಿನಾರ್

**ಒಳ ಮೀಸಲು ಸೌಲಭ್ಯ ಸಿಗಲೇಬೇಕು**




### ■ ನ್ಯಾ. ನಾಗಮೋಹನದಾಸ್ ಸಮಿತಿ

ಪರಿಶಿಷ್ಟ ವರ್ಗಕ್ಕೆ ಸೇರಿದ ವಾಲ್ಮೀಕಿ ಜನಾಂಗದ ಮೀಸಲು ಹೆಚ್ಚಳ ಪರಾಮರ್ಶೆಗೆ ನ್ಯಾ.ನಾಗಮೋಹನದಾಸ್ ಸಮಿತಿ ರಚಿಸಲಾಗಿತ್ತು. ವರದಿಯು ಎಸ್‌ಟಿ ಮೀಸಲನ್ನು ಶೇ.7ಕ್ಕೆ ಹೆಚ್ಚಿಸಬೇಕು. ಎಸ್‌ಸಿಗೂ ಶೇ.2ರಷ್ಟು ಹೆಚ್ಚುವರಿ ಮೀಸಲು ಕಲ್ಪಿಸಬೇಕು. ಅಲೆಮಾರಿಗಳು, ದೇವದಾಸಿಯರ ಮಕ್ಕಳನ್ನೂ ಮೀಸಲು ವ್ಯಾಪ್ತಿಗೆ ತರಬೇಕೆಂದು ಶಿಫಾರಸು ಮಾಡಿದೆ.

### ■ ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ

ಸಿದ್ದರಾಮಯ್ಯ ಸರಕಾರದ ಅವಧಿಯಲ್ಲಿ ಎಚ್. ಕಾಂತರಾಜ್ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಿ, ಸರಕಾರಕ್ಕೆ ವರದಿ ಸಲ್ಲಿಸಿದೆ. ಜಾತಿಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಸೌಲಭ್ಯ ಕಲ್ಪಿಸಬೇಕಾದರೆ ನಿಖರವಾದ ಅಂಕಿ-ಅಂಶಗಳು ಬೇಕು ಎಂಬ ಕಾರಣಕ್ಕೆ ಈ ಸಮೀಕ್ಷೆ ನಡೆದಿತ್ತು. ಆದರೆ, ಈ ವರದಿಯೂ ಬಹಿರಂಗವಾಗಿಲ್ಲ.

### ■ ನ್ಯಾ. ಸದಾಶಿವ ಆಯೋಗ

ಪರಿಶಿಷ್ಟ ಜಾತಿಯೊಳಗೆ ಒಳಮೀಸಲು ನೀಡುವುದರ ವೈಜ್ಞಾನಿಕ ಅಧ್ಯಯನಕ್ಕಾಗಿ 2005ರಲ್ಲಿ ರಚನೆಯಾದ ನ್ಯಾಯಮೂರ್ತಿ ಎ.ಜೆ. ಸದಾಶಿವ ನೇತೃತ್ವದ ಆಯೋಗ 2012ರಲ್ಲಿ ವರದಿ ನೀಡಿದೆ. ಇದನ್ನು ವಿಧಾನಮಂಡಲದಲ್ಲಿ ಇನ್ನೂ ಮಂಡಿಸಲಾಗಿಲ್ಲ. ಇದರ ಮುಖ್ಯಾಂಶಗಳ ಆಧಾರದಲ್ಲಿ ಪರ-ವಿರೋಧ ಚರ್ಚೆಗಳು ಜೋರಾಗಿ ನಡೆಯುತ್ತಿವೆ.

### ಪ್ರಮುಖ ಬೇಡಿಕೆಗಳು

- ನ್ಯಾ. ಸದಾಶಿವ ಆಯೋಗದ ವರದಿ ವಿಧಾನಸಭೆಯಲ್ಲಿ ಮಂಡನೆಯಾಗಬೇಕು.
- ವೈಜ್ಞಾನಿಕವಾಗಿ ವಿಶ್ಲೇಷಣೆ ನಡೆಸಿ ಜನಸಂಖ್ಯೆ ಆಧಾರದಲ್ಲಿ ಮೀಸಲಾತಿ ಹಂಚಿಕೆ
- ಒಬಿಸಿ ಆಯೋಗದ ವರದಿ, ನ್ಯಾ.ನಾಗಮೋಹನದಾಸ ವರದಿಯೂ ಹೊರಬರಲಿ
- ಊಹಾಪೋಹದ ಆಧಾರದಲ್ಲಿ ದೋಷಾರೋಪ ನಿಲ್ಲಬೇಕು
- ಮೀಸಲಾತಿ ಹಂಚಿಕೆ ಬೇಡಿಕೆ ಯಾರದೋ ವಿರುದ್ಧದ ಸಂಚೆಂದು ತಿಳಿಯಬಾರದು



ನನ್ನ ನೇತೃತ್ವದ ಆಯೋಗದ ವರದಿಯ ಬಗ್ಗೆ ತಿಳಿಯದವರು ಊಹಾಪೋಹದ ನೆಲೆಯಲ್ಲಿ ಮಾತನಾಡುತ್ತಿದ್ದಾರೆ. ಸರಕಾರ ಕೂಡಲೇ ಅದನ್ನು ಮಂಡಿಸಬೇಕು. ಬಳಿಕ ಚರ್ಚೆ ನಡೆಯಲಿ.

- ನ್ಯಾ. ಎ.ಜೆ. ಸದಾಶಿವ